ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ,

ಕೆಂಪೇಗೌಡ ರಸ್ತೆ, ಬೆಂಗಳೂರು-**09**

ಸಂಖ್ಯೆ: ಸಿಎಸಿ-5/ಡಿಇಎಲ್ಇಡಿ/ಡಿಪಿಇಡಿ.ಡಿಪಿಎಸ್ಇ./ದಾ-02/22-23 ದಿನಾಂಕ: 05-07-2022

## 2022–23ನೇ ಸಾಲಿನ ಡಿ.ಇಎಲ್.ಇಡಿ/ ಡಿ.ಪಿ.ಇಡಿ/ ಡಿ.ಪಿ.ಎಸ್.ಇ ಕೋರ್ಸಿಗೆ ದಾಖಲಾತಿಗಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಮುಖ್ಯವಾದ ಸೂಚನೆಗಳ ಹೊತ್ತಿಗೆ.

1. ಅರ್ಹ ಅಭ್ಯರ್ಥಿಗಳು ಇಲಾಖೆಯ ವೆಬ್ ಸೈಟ್ www.schooleducation.kar.nic.in ರಲ್ಲಿರುವ ಅರ್ಜಿ ಮುದ್ರಿಸಿಕೊಂಡು ಭರ್ತಿ ಮಾಡತಕ್ಕದ್ದು. ಭರ್ತಿ ಮಾಡಿದ ಅರ್ಜಿಯನ್ನು ಸಂಬಂಧಿಸಿದ ಜಿಲ್ಲಾ ನೋಡಲ್/ವ್ಯವಸ್ಥಾಪಕ ಕೇಂದ್ರ (DIET)ಗೆ ಸಲ್ಲಿಸುವುದು.
2. ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಈ ಕೆಳಕಂಡ ಸೂಚನೆಗಳನ್ನು ತಪ್ಪದೇ ಓದಿಕೊಂಡು ನಂತರ ಭರ್ತಿ ಮಾಡುವುದು.
3. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **31-07-2022**. ಅರ್ಜಿಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಸಮಸ್ಯೆ ಎದುರಾದಲ್ಲಿ ಸಂಬಂಧಪಟ್ಟ ಜಿಲ್ಲಾ ನೋಡಲ್/ವ್ಯವಸ್ಥಾಪಕ ಕೇಂದ್ರಗಳನ್ನು ದೂರವಾಣಿಯ ಮೂಲಕ ಸಂಪರ್ಕಿಸಿ ಅಗತ್ಯ ಮಾಹಿತಿಯನ್ನು ಪಡೆದು ಅರ್ಜಿಯನ್ನು ಸಲ್ಲಿಸಬಹುದಾಗಿದೆ.
4. ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
5. ನಿಗದಿತ ದಿನಾಂಕದ ನಂತರ ಶುಲ್ಕವನ್ನು ಪಾವತಿಸಿದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹೊರತುಪಡಿಸಿ ಬೇರೆ ಯಾವುದೇ ಬ್ಯಾಂಕ್ ನಲ್ಲಿ ಹಣ ಪಾವತಿಸತಕ್ಕದ್ದಲ್ಲ**.

6. ಅರ್ಜಿಯಲ್ಲಿ ಭರ್ತಿ ಮಾಡಿರುವ ಮಾಹಿತಿಗಳು ದೋಷಪೂರಿತ ಹಾಗೂ ತಪ್ಪು ಮಾಹಿತಿಗಳನ್ನು ಒಳಗೊಂಡಿದ್ದಲ್ಲಿ ಅಭ್ಯರ್ಥಿಗಳೇ ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ.
7. ಅರ್ಜಿ ಶುಲ್ಕ ಪಾವತಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗಾಗಿ **Special Officer, CAC, Bengaluru** ಇವರ ಹೆಸರಿನಲ್ಲಿ DD ಖರೀದಿಸುವುದು. **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಅರ್ಜಿ ಶುಲ್ಕವನ್ನು Demand Draft/ ಬ್ಯಾಂಕ್ ಹುಂಡಿ ಮೂಲಕ ಮಾತ್ರವೇ ಪಾವತಿಸುವುದು**. ಬೇರಾವುದೇ ಬ್ಯಾಂಕಿನಲ್ಲಿ ಶುಲ್ಕ ಪಾವತಿಸಲು ಅವಕಾಶವಿಲ್ಲ. ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಅಥವಾ ಇನ್ನಾವುದೇ ಸ್ವರೂಪದಲ್ಲಿ ಶುಲ್ಕ ಪಾವತಿಸತಕ್ಕದ್ದಲ್ಲ ಹಾಗೂ ಅಂತಹ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
8. ಒಮ್ಮೆ ಪಾವತಿಸಿದ ಅರ್ಜಿಯ ಶುಲ್ಕವನ್ನು ಯಾವುದೇ ಕಾರಣಗಳಿಗೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಹೊಂದಾಣಿಕೆ ಮಾಡಲಾಗುವುದಿಲ್ಲ.
9. ಮೀಸಲಾತಿ ಕೋರುವ ಎಲ್ಲಾ ಪ್ರಮಾಣ ಪತ್ರಗಳ ನಮೂನೆಗಳನ್ನು Broucher ನಲ್ಲಿ ಕೊಟ್ಟಿರುವಂತೆ ಅಥವಾ ಅನ್ವಯಿಸುವ ನಿಯಮಗಳ ನಮೂನೆಯಲ್ಲಿಯೇ ಇರಬೇಕು. ಪ್ರಮಾಣ ಪತ್ರಗಳನ್ನು ನಿರ್ಧಿಷ್ಟ ಸಂಬಂಧಪಟ್ಟ ಪ್ರಾಧಿಕಾರದಿಂದ ಅರ್ಜಿ ಸಲ್ಲಿಸುವ ದಿನಾಂದಕೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು.
10. ಅಭ್ಯರ್ಥಿಗಳು ಅರ್ಜಿಯಲ್ಲಿ ನೀಡಿರುವ ಮಾಹಿತಿಗಳ ಬಗ್ಗೆ ಯಾವುದೇ ಹಂತದಲ್ಲೂ ಬದಲಾವಣೆಗೆ ಅವಕಾಶವಿರುವುದಿಲ್ಲ.
11. ಅರ್ಜಿಯಲ್ಲಿ ಸಲ್ಲಿಸಿರುವ ಮಾಹಿತಿಗಳನ್ನೇ ಆಧಾರವಾಗಿಟ್ಟುಕೊಂಡು ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದರಿಂದ ಯಾವುದೇ ಹಂತದಲ್ಲಿ ಅಪೂರ್ಣ/ ಅಸ್ಪಷ್ಟ/ ತಪ್ಪು ಮಾಹಿತಿ ನೀಡಿದಲ್ಲಿ ಅಭ್ಯರ್ಥಿಗಳೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ.

12. ಯಾವುದೇ ದಾಖಲಾತಿಗಳನ್ನು ಅಂಚೆ ಮೂಲಕವಾಗಲೀ ಅಥವಾ ಮುದ್ದಾಂ ಮೂಲಕವಾಗಲೀ ಸಿ.ಎ.ಸಿ ಗೆ ಸಲ್ಲಿಸತಕ್ಕದ್ದಲ್ಲ. ಸಂಬಂಧಪಟ್ಟ ಡಯಟ್ ಗಳಿಗೆ ಸಲ್ಲಿಸುವುದು.
13. ಮೀಸಲಾತಿಯಡಿಯಲ್ಲಿ ದಾಖಲಾತಿ ಬಯಸುವ ಅಭ್ಯರ್ಥಿಗಳು ಅರ್ಜಿಯಲ್ಲಿ ಮೀಸಲಾತಿ ಸೌಲಭ್ಯಕ್ಕಾಗಿ ಇರುವ ಅಂಕಣವನ್ನು ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು, ಅಂಕಣವನ್ನು ಖಾಲಿ ಬಿಟ್ಟಲ್ಲಿ ಸಾಮಾನ್ಯ ವರ್ಗ ಎಂದು ಪರಿಗಣಿಸಲಾಗುವುದು. ನಂತರ ಯಾವುದೇ ಹಂತದಲ್ಲಿ ಮೀಸಲಾತಿಯನ್ನು ಸೇರ್ಪಡೆ ಮಾಡಲು ಅವಕಾಶವಿರುವುದಿಲ್ಲ.
14. ಆಯ್ಕೆಯಾಗಿರುವ ಎಲ್ಲಾ ಅರ್ಹ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಹಾಗೂ ನಿಗದಿತ ಅರ್ಜಿ ಶುಲ್ಕವನ್ನು ಪಾವತಿಸಿರುವ ಬ್ಯಾಂಕ್ ಹುಂಡಿಯ ಪ್ರತಿಯನ್ನು ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ದಾಖಲಾತಿಗೆ ಪರಿಗಣಿಸಲಾಗುವುದಿಲ್ಲ.
15. ಅರ್ಜಿಯೊಂದಿಗೆ ಸಂಬಂಧಪಟ್ಟ ಅಡಕಗಳು (ಜೆರಾಕ್ಸ್ ಪ್ರತಿಗಳು) ಹಾಗೂ ಡಿ.ಡಿ ಡಯಟ್/ ನೋಡಲ್ ಕೇಂದ್ರಗಳಿಗೆ ಸಲ್ಲಿಸುವುದು.

ವೇಳಾ ಪಟ್ಟಿ (Calender of Events)

1. ಅರ್ಜಿಯನ್ನು ತುಂಬಲು ನಿಗದಿಪಡಿಸಿದ ಪ್ರಾರಂಭದ ದಿನಾಂಕ: 05-07-2022.
2. ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 31-07-2022.
3. ನಿಗದಿತ ಶುಲ್ಕ ಬ್ಯಾಂಕ್ ಗೆ ಪಾವತಿಸಲು ಕೊನೆಯ ದಿನಾಂಕ: 31-07-2022

**********